ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
5ನೇ ಮಹಡಿ, ಪ್ಲಾಟ್ ನಂ.1243, ಕೆ.ಎಸ್.ಐ.ಐ.ಡಿ.ಸಿ.ಕಟ್ಟಡ, ಐ.ಟಿ.ಪಾರ್ಕ್,
ಸೌತ್ ಬ್ಲಾಕ್, ರಾಜಾಜಿನಗರ, ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು-560044
Ph : 080 -22342163, 22372738 E-mail: karnregs.eoffice@gmail.com

ಸಂಖ್ಯೆ:ಗ್ರಾಅಪ:250:ಉಖಾಯೋ:2022 ದಿನಾಂಕ:08.06.2022

**ಪತ್ರಿಕಾ ಪ್ರಕಟಣೆ**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದ ಸಂಬಂಧದಲ್ಲಿ ಸ್ವೀಕೃತವಾಗುವ ದೂರುಗಳ ವಿಲೇವಾರಿ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ಈ ಕೆಳಕಂಡ ಜಿಲ್ಲೆಗಳಲ್ಲಿ ಖಾಲಿ ಇರುವ / ಮುಂದಿನ ದಿನಗಳಲ್ಲಿ ಖಾಲಿಯಾಗಲಿರುವ ಓಂಬುಡ್ಸ್‌ಮನ್‌ರವರ ಹುದ್ದೆಗಳನ್ನು ಆಯ್ಕೆ ಮೂಲಕ ತುಂಬಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| | |
|---|---|
| **ಓಂಬುಡ್ಸ್ ಮನ್ ಹುದ್ದೆಗಳಿರುವ ಜಿಲ್ಲೆಗಳು:** | ಬೆಂಗಳೂರು ನಗರ, ದಾವಣಗೆರೆ, ದಕ್ಷಿಣ ಕನ್ನಡ, ಕಲಬುರಗಿ, ಕೊಡಗು, ಮೈಸೂರು, ಉತ್ತರ ಕನ್ನಡ, ಉಡುಪಿ ಮತ್ತು ಯಾದಗಿರಿ. |

ಜಿಲ್ಲಾ ಮಟ್ಟದಲ್ಲಿ ಓಂಬುಡ್ಸ್‌ಮನ್‌ಗಳಾಗಿ ಕಾರ್ಯನಿರ್ವಹಿಸಲು ಆಸಕ್ತಿ ಇರುವ ವ್ಯಕ್ತಿಗಳು ಇಲಾಖೆಯ ವೆಬ್‌ಸೈಟ್ www:rdpr.karnataka.gov.in ನಲ್ಲಿ ನಿಗಧಿತ ಅರ್ಜಿ ನಮೂನೆಯನ್ನು ಅವರೋಹಣ (download) ಮಾಡಿಕೊಂಡು, ಅನುಬಂಧ(1)ರಲ್ಲಿರುವ ವಿವರಗಳನ್ನು ಅವಲೋಕಿಸಿ, ಪೂರಕ ದಾಖಲೆಗಳೊಂದಿಗೆ ಅರ್ಜಿಯನ್ನು ಖುದ್ದಾಗಿ/ಅಂಚೆ ಮೂಲಕ ದಿನಾಂಕ:09.07.2022ರೊಳಗೆ ತಲುಪುವಂತೆ ಆಯುಕ್ತರು ಗ್ರಾಮೀಣಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ೫ನೇ ಮಹಡಿ, ಪ್ಲಾಟ್ ನಂ.1243 ಕೆ.ಎಸ್.ಐ.ಐ.ಡಿ.ಸಿ.ಕಟ್ಟಡ, ಐ.ಟಿ. ಪಾರ್ಕ್, ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರೀಯಲ್ ಎಸ್ಟೇಟ್, ಬೆಂಗಳೂರು–560044 ಇವರಿಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಆಯುಕ್ತಾಲಯದ ಓಂಬುಡ್ಸ್‌ಮನ್ ಶಾಖೆಯ ದೂರವಾಣಿ ಸಂಖ್ಯೆ: 080-22342163 ಸಂಪರ್ಕಿಸಬಹುದು. ನಿಗಧಿ ಪಡಿಸಿದ ದಿನಾಂಕದ ನಂತರ ತಡವಾಗಿ ಸ್ವೀಕೃತವಾಗುವ ಅಥವಾ ಅಪೂರ್ಣ ಮಾಹಿತಿ ಹೊಂದಿರುವ ಅರ್ಜಿಗಳು ಪರಿಗಣಿಸಲ್ಪಡುವುದಿಲ್ಲ.

P.G. 8/6/22
ಮುಖ್ಯ ಕಾರ್ಯಾಚರಣೆ ಅಧಿಕಾರಿ (ಪ್ರ)
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

08/06/22

16.02.2022 OSC Meeting

# ಅನುಬಂಧ-1

(ಓಂಬುಡ್ಸ್ ಮನ್ ನೇಮಕಾತಿಗಾಗಿರುವ ಅರ್ಹತೆಗಳು)

1. ಈ ಕೆಳಕಂಡ ಯಾವುದಾದರೊಂದು ಕ್ಷೇತ್ರದಲ್ಲಿ ಕನಿಷ್ಠ 10 ವರ್ಷಗಳ ಸೇವಾನುಭವ ಹೊಂದಿರಬೇಕಾಗಿರುತ್ತದೆ.
   ಅ) ಸಾರ್ವಜನಿಕ ಆಡಳಿತ ಆ) ಕಾನೂನು
   ಇ) ಶೈಕ್ಷಣಿಕ ಕ್ಷೇತ್ರ ಈ) ಸಮಾಜ ಸೇವೆ/ಮ್ಯಾನೇಜ್‌ಮೆಂಟ್
2. ಸಾರ್ವಜನಿಕರೊಂದಿಗೆ/ಸಮುದಾಯದ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸಿದ ಅನುಭವವು ಒಂದು ಕಡ್ಡಾಯ ಅರ್ಹತೆಯಾಗಿರುತ್ತದೆ.
3. ಅರ್ಜಿ ಸಲ್ಲಿಸುವವರು ಯಾವುದೇ ರಾಜಕೀಯ ಪಕ್ಷದ ಮತ್ತು ನಿಷೇಧಿತ ಸಂಘ ಸಂಸ್ಥೆಯ ಸದಸ್ಯರಾಗಿರಬಾರದು, ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿರಬಾರದು, ಸರ್ಕಾರಿ ನೌಕರರಾಗಿದ್ದಲ್ಲಿ ಇಲಾಖಾ ವಿಚಾರಣೆ ಬಾಕಿ ಇರಬಾರದು /ದಂಡನೆಗೆ ಒಳಪಟ್ಟಿರುಬಾರದು.
4. ತಪಾಸಣೆ, ಕ್ಷೇತ್ರ ಭೇಟಿ, ಹಾಗೂ ವೀಕ್ಷಣೆ ಕೆಲಸಗಳಿಗೆ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಪ್ರವಾಸ ಕೈಗೊಳ್ಳಲು ದೈಹಿಕವಾಗಿ ಸಮರ್ಥರಾಗಿರಬೇಕು.
5. ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಗರಿಷ್ಠ ವಯಸ್ಸು 66 ವರ್ಷಗಳನ್ನು ಮೀರಿರಬಾರದು.
6. ನೇಮಕಾತಿಯು ಮೊದಲಿಗೆ 2 ವರ್ಷಗಳ ಅವಧಿಯದಾಗಿರುತ್ತದೆ. ಆದರೆ ಕಾರ್ಯನಿರ್ವಹಣೆಯು ಅತೃಪ್ತಿಕರವಾಗಿ ಕಂಡು ಬಂದಲ್ಲಿ ಅವಧಿಗೆ ಮುನ್ನವೇ ಹುದ್ದೆಯಿಂದ ಬಿಡುಗಡೆ ಮಾಡಲಾಗುವುದು.
7. ಕೇಂದ್ರ/ರಾಜ್ಯ ಸರ್ಕಾರವು ಹೊರಡಿಸುವ ಆದೇಶಗಳ ಅನುಸಾರ ಸಂಭಾವನೆ, ಸಿಟ್ಟಿಂಗ್ ಫೀಜು ನೀಡಲಾಗುವುದು. ಪ್ರಸ್ತುತ ಮಾಸಿಕ ರೂ.10000/- ಗೌರವಧನ ಹಾಗೂ ಪ್ರತಿ ಸಿಟ್ಟಿಂಗ್‌ಗೆ ರೂ2250/- ದಂತೆ ಗರಿಷ್ಠ ರೂ.45000/- ಮಿತಿಗೊಳಪಟ್ಟು ಸಿಟ್ಟಿಂಗ್ ಫೀಜು ನೀಡಲಾಗುವುದು.

photo

## ಒಂಬುಡ್ಸ್ ಮನ್ ನೇಮಕಾತಿಯ ಅರ್ಜಿ ನಮೂನೆ:

| | | |
|---|---|---|
| 1 | ವೈಯಕ್ತಿಕ ಮಾಹಿತಿ ವಿವರ | |
| 1.1 | ಹೆಸರು : | |
| 1.2 | ವಯಸ್ಸು : (09.06.2022 ದಿನಾಂಕದಂತೆ)<br>(ಜನನ ಪ್ರಮಾಣ ಪತ್ರ ಲಗತ್ತಿಸುವುದು) | |
| 1.3 | ಅಂಚೆ ವಿಳಾಸ ಅಥವಾ ಪತ್ರ ವ್ಯವಹಾರದ ವಿಳಾಸ: | |
| 1.4 | ದೂರವಾಣಿ/ಮೊಬೈಲ್ ಸಂಖ್ಯೆ. ಇ-ಮೇಲ್ ಐಡಿ: | |
| 1.5 | ಖಾಯಂ ವಿಳಾಸ :<br>(ವಾಸಸ್ಥಳದ ರುಜುವಾತು ದಾಖಲಾತಿಯನ್ನು ಲಗತ್ತಿಸುವುದು) | |
| 1.6 | ನೀವು ವೈದ್ಯಕೀಯವಾಗಿ (ದೈಹಿಕವಾಗಿ & ಮಾನಸಿಕವಾಗಿ) ಕ್ಷೇತ್ರಗಳ ಭೇಟಿ ನಡೆಸಲು ದೃಢಕಾಯರಾಗಿರುವಿರಾ?( ದೃಢೀಕೃತ ವೈದ್ಯಕೀಯ ಪ್ರಮಾಣ ಪತ್ರ ಲಗತ್ತಿಸುವುದು) | |
| 1.7 | ಅ) ರಾಜಕೀಯ ಪಕ್ಷದ ಸದಸ್ಯರೇ ?<br>ಆ) ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದೀರಾ/ಆರೋಪ ಪಟ್ಟಿ ದಾಖಲಾಗಿದೆಯೇ?<br>ಇ) ಇಲಾಖಾ ವಿಚಾರಣೆಯಲ್ಲಿ ದಂಡನೆಗೆ ಒಳಪಟ್ಟಿರುವಿರೇ?/ ಯಾವುದಾದರೂ ಇಲಾಖಾ ವಿಚಾರಣೆ ಬಾಕಿ ಇದೆಯೇ?<br>(ಪಬ್ಲಿಕ್ ನೋಟರಿಯಿಂದ ದೃಢೀಕರಿಸಿದ ವೈಯಕ್ತಿಕ ಘೋಷಣಾ ಪ್ರಮಾಣ ಪತ್ರವನ್ನು ಸಲ್ಲಿಸುವುದು) | |
| 1.8 | ಯಾವುದೇ ಸಾಮರ್ಥ್ಯದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆ ಹೊಂದಿರುವಿರಾ? | ಹೌದು/ಇಲ್ಲ |
| 2 | ವೃತ್ತಿ ಪರ ಮಾಹಿತಿ ವಿವರ : | |
| 2.1 | ಉನ್ನತ ವಿದ್ಯಾರ್ಹತೆ :<br>(ಕನಿಷ್ಠ ವಿದ್ಯಾರ್ಹತೆ: ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವೀಧರರಾಗಿರತಕ್ಕದ್ದು) | |
| 2.2 | ಎಷ್ಟು ವರ್ಷಗಳ ಕೆಲಸದ ಅನುಭವವಿದೆ : ವಿವರ ನೀಡುವುದು | |
| 2.3 | ಕ್ಷೇತ್ರ ಮಟ್ಟದ ಅನುಭವ: ಈ ಕೆಳಕಂಡ ಯಾವುದಾದರು ಒಂದು ಕ್ಷೇತ್ರದಲ್ಲಿ ಕನಿಷ್ಠ 10 ವರ್ಷಗಳು ಕಾರ್ಯನಿರ್ವಹಿಸಿರುವ ಅನುಭವ ಇರತಕ್ಕದ್ದು. ಈ ಕುರಿತು ವಿವರವಾದ ಟಿಪ್ಪಣಿ ಹಾಗೂ ಕಾರ್ಯನಿರ್ವಹಿಸಿದ ಅನುಭವಕ್ಕೆ ಸಂಭಂದಿಸಿದ ವಿವರಗಳನ್ನು ನೀಡುವುದು.<br>(ಅ) ಸಾರ್ವಜನಿಕ ಆಡಳಿತ<br>(ಆ) ಕಾನೂನು<br>(ಇ) ಶೈಕ್ಷಣಿಕ ಸೇವೆ<br>(ಈ) ಸಮಾಜ ಸೇವೆ /ಮ್ಯಾನೇಜಿಮೆಂಟ್ | |
| 2.4 | ಈ ಹಿಂದೆ ಕಾರ್ಯ ನಿರ್ವಹಿಸಿದ್ದ ಗರಿಷ್ಠ ಹುದ್ದೆ/ಸ್ಥಾನ : | |
| 2.5 | ಯಾವುದಾದರೂ ಸೊಸೈಟಿ/ವೃತ್ತಿಕಾಯ ಸಂಸ್ಥೆಯ ಸದಸ್ಯರೇ? ಹೌದಾದಲ್ಲಿ ವಿವರಗಳನ್ನು ನೀಡುವುದು: | |
| 2.6 | ನೇಮಕಾತಿ ಬಯಸುವ ಜಿಲ್ಲೆ: (ಆದ್ಯತೆ ನಮೂದಿಸುವುದು)<br>(ಸಮಿತಿಯ ನಿರ್ಣಯವೇ ಅಂತಿಮ) | 1) 2) 3) |
| 3 | ಸ್ವಯಂ ಘೋಷಣೆ: | |

ಮೇಲೆ ಸಲ್ಲಿಸಿರುವ ಮಾಹಿತಿಯು ಸರಿಯಾಗಿದೆಯೆಂದು ಹಾಗೂ ಅಧಿನಿಯಮದ ಮಿತಿಯೊಳಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕುರಿತು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಕಾರ್ಯಚರಣೆಯ ಮಾರ್ಗಸೂಚಿಗಳನ್ವಯ ರೂಪಿಸಿರುವ ಪ್ರಕಾರ್ಯಗಳನ್ನು ಹಾಗೂ ಒಂಬುಡ್ಸ್ಮನ್ ಕುರಿತು ಜಾಹಿರಾತು ಮೂಲಕ ನೀಡಿರುವ ಸೂಚನೆಗಳನ್ನು ಮತ್ತು ಒಂಬುಡ್ಸ್ಮನ್ ಹುದ್ದೆಯು ಅರೆಕಾಲಿಕ ಹುದ್ದೆಯಾಗಿದೆ ಎಂಬುದನ್ನು ಪೂರ್ಣವಾಗಿ ಅರ್ಥೈಸಿಕೊಂಡಿರುವೆನೆಂದು ಈ ಮೂಲಕ ಘೋಷಿಸಿರುತ್ತೇನೆ.

ದಿನಾಂಕ:

ಸ್ಥಳ:

ಅರ್ಜಿದಾರರ ಹೆಸರು ಮತ್ತು ಸಹಿ: